# ಮರ–ಮರ್ಮರ

ಬಹರೇನ್‌ನಲ್ಲೊಂದು ಮರವಿದೆ. ನಿರಂತರ ಬೇಯುವ ಬಯಲಿನ ನಡುವೆ ಹಟಯೋಗಿಯಂತೆ ನಿಂತಿದೆ, ಒಂಟಿಯಾಗಿದೆ. ನೂರಾರು ವರ್ಷಗಳಿಂದ ಧ್ಯಾನದಲ್ಲಿ ಮುಳುಗಿರುವಂತಿದೆ. ಈ ಮರ ನಾಲ್ಕುನೂರು ವರ್ಷಗಳನ್ನು ಕಂಡಿರಬಹುದು ಎನ್ನುವುದು ಸಸ್ಯಶಾಸ್ತ್ರವನ್ನು ಬಲ್ಲವರ ಲೆಕ್ಕ. ಮಳೆಯ ಕರುಣೆಯಿಲ್ಲದ ಮರಳುಗಾಡಲ್ಲಿ ಮರ ಬದುಕಿರುವುದು ಹೇಗೆ? ನೀರಿನ ಸೆಲೆಗೆ ನಿಲುಕುವಷ್ಟು ಆಳಕ್ಕೆ ಮರದ ಬೇರುಗಳಿಳಿದಿವೆ ಎನ್ನುವವರಿದ್ದಾರೆ. ಮರುಭೂಮಿಯ ಮರಳು ಕಣಗಳಲ್ಲಿನ ಆರ್ದ್ರತೆಯನ್ನು ಹೀರಿಕೊಳ್ಳುವ ಮೂಲಕ ಮರ ಉಸಿರು ಹಿಡಿದುಕೊಂಡಿದೆ ಎಂದು ಹೇಳುವವರಿದ್ದಾರೆ. ಹಿಂದೊಮ್ಮೆ ಹಸುರಿನಿಂದ ಕೂಡಿದ್ದ ಪ್ರದೇಶ, ಕಾಲದ ಹೊಡೆತಕ್ಕೆ ಸಿಕ್ಕಿ ಬಂಜರಾಗಿದೆ, ಪಳೆಯುಳಿಕೆಯ ರೂಪದಲ್ಲೀಗ ಇದೊಂದೇ ಮರ ಉಳಿದಿದೆ ಎನ್ನುವ ಟಿಪ್ಪಣಿಯೂ ಇದೆ. ವ್ಯಾಖ್ಯಾನಗಳೇನೇ ಇರಲಿ, ಸೂರ್ಯನ ಸುಡುಗಣ್ಣುಗಳಿಗೆ ಮೈಯೊಡ್ಡಿಕೊಂಡೂ ಹಸುರು ಮುಕ್ಕಳಿಸುತ್ತಾ ನಿಂತಿರುವ 'ಟ್ರೀ ಆಫ್ ಲೈಫ್' ಎಂದು ಕರೆಸಿಕೊಳ್ಳುವ ಮರ ಒಂದು ಬೆರಗಿನಂತಿದೆ, ಬೆಡಗಿನಂತಿದೆ. ಆ ಕಾರಣಕ್ಕೇ, ಬಹರೇನಿಗೆ ಬರುವ ಪ್ರವಾಸಿಗರಿಗೆ ಮರವೂ ಒಂದು ಆಕರ್ಷಣೆ.

'ಯಾರಿಲ್ಲಿಗೆ ಬಂದವರು ಕಳೆದಿರುಳು, ಏ ಗಾಳಿ ಆ ಕಥೆಯನೊರೆದು ಮುಂದಕೆ ತೆರಳು' ಎನ್ನುವ ಯರ್ಮುಂಜ ರಾಮಚಂದ್ರರ ಕವಿತೆಯನ್ನು ನೆನಪಿಸಿಕೊಂಡು, ಮರವನ್ನೂ ನಾವು ಮಾತಿಗೆಳೆಯಬಹುದು. ಆದರೆ, ಮರ ಮರುನುಡಿಯುವುದಿಲ್ಲ ಅಥವಾ ಮರದ ಮಾತು ನಮಗೆ ಅರ್ಥವಾಗುವುದಿಲ್ಲ. ಮರದೊಂದಿಗೆ ಸಂವಹನ ಸಾಧ್ಯವಾಗುವಂತಿದ್ದರೆ ಬಹರೇನಿನ ಮರ ಏನೆಲ್ಲ ಕಥೆಗಳನ್ನು ನಮಗೆ ಹೇಳಬಹುದಿತ್ತು? ಮಹಾತ್ಮರ ಮಾತುಗಳನ್ನು ನಿರ್ಲಕ್ಷಿಸಿರುವ, ಬದುಕುಗಳನ್ನು ಉಪೇಕ್ಷಿಸಿರುವ ಸಂದರ್ಭದಲ್ಲಿ, ಮರಕ್ಕೆ ಮಾತು ಬಂದಿದ್ದರೆ ನಮ್ಮ ಕಥನ ಕುತೂಹಲಕ್ಕೊಂದಿಷ್ಟು ಸರಕು ದೊರೆಯುತ್ತಿತ್ತೇ ಹೊರತು, ದೊಡ್ಡ ವ್ಯತ್ಯಾಸವೇನೂ ಆಗುತ್ತಿರಲಿಲ್ಲ. ಮರದ ಬದುಕಿನಿಂದ ನಮ್ಮ ಬದುಕಿಗೆ ಏನನ್ನಾದರೂ ಅಳವಡಿಸಿಕೊಳ್ಳಲಿಕ್ಕೆ ಮಾತಿನ ಅಗತ್ಯವಾದರೂ ಏನಿದೆ, ಮರದ ಬದುಕೇ ನಮ್ಮ ಕಣ್ಣೆದುರಿಗಿದೆಯಲ್ಲ?

ಕಲಿಕೆಯ ಮಾತಿರಲಿ, ಕಲ್ಪನೆಯ ವಿಷಯವನ್ನು ನೋಡಿ. ಕಲ್ಪಿಸಿಕೊಳ್ಳಿ, ನಮ್ಮ ಮಲೆನಾಡಿನಲ್ಲೋ ಸಹ್ಯಾದ್ರಿಯ ಒಡಲಲ್ಲೋ ಇಂಥದೊಂದು ಮರ ಕಾಲಚಕ್ರದ ಉರುಳಿನಲ್ಲೆಂದಾದರೂ ಎಡತಾಕಬಹುದೆ? 'ಇದು ನೂರಾರು ವರ್ಷಗಳ ಮರ' ಎಂದು ನಮ್ಮ ವಾರಸುದಾರರು ಇಲ್ಲಿಗೆ ಬರುವ ಪ್ರವಾಸಿಗರಿಗೆ ಬಣ್ಣಿಸಿ ಮರವೊಂದನ್ನು ಪ್ರವಾಸಿ ಆಕರ್ಷಣೆ ಮಾಡಬಹುದೆ? ಹೀಗೆಲ್ಲ ಊಹಿಸಿಕೊಳ್ಳುವುದು ಅಸಹನೀಯವಾದರೂ, ಇದನ್ನು ಸಾಧ್ಯವೇ ಇಲ್ಲದ ಫ್ಯಾಂಟಸಿ ಎನ್ನುವಂತಿಲ್ಲ. ಬಹರೇನಿನ ಚುಂಬಕದಂಥ ಮರವನ್ನು ಹೊಂದುವ ಬಯಕೆಯಲ್ಲಿ, ಅಲ್ಲಿನ ಮಣ್ಣಿನ ಬಂಜೆತನವನ್ನು ಆಹ್ವಾನಿಸುವ ಅಪಾಯವೂ ಇದೆ. ನಮ್ಮ ಮಲೆನಾಡು, ಪಶ್ಚಿಮ ಘಟ್ಟಗಳು ಹಸುರು ಕಳೆದುಕೊಳ್ಳುವುದನ್ನು ಹೇಗೆ ಕಲ್ಪಿಸಿಕೊಳ್ಳುವುದು. ದುರದೃಷ್ಟವೆಂದರೆ, ನಮ್ಮ ಪ್ರಯತ್ನಗಳು ಆ ನಿಟ್ಟಿನಲ್ಲೇ ನಡೆಯುತ್ತಿವೆ – ಪ್ರಜ್ಞಾಪೂರ್ವಕವಾಗಿ, ಅಪ್ರಜ್ಞಾಪೂರ್ವಕವಾಗಿ.

ನಗರಗಳಲ್ಲಿನ ಚರಂಡಿಗಳ ಉಸಿರುಗಟ್ಟಿಸುವಲ್ಲಿ ಸ್ಪರ್ಧೆ ನಡೆಸುತ್ತೇವೆಯೇ ಹೊರತು, ಜಲಮೂಲಗಳನ್ನು ಉಳಿಸುವ ಬಗ್ಗೆ ನಿರಾಸಕ್ತರೇ ಹೆಚ್ಚು. ನೀರನ್ನು ಕೊಳ್ಳುವ ಸ್ಥಿತಿಗೆ ಗೊಣಗಿಕೊಂಡಾದರೂ ಒಗ್ಗಿಕೊಳ್ಳುತ್ತೇವೆಯೇ ಹೊರತು, ನೀರನ್ನು ಉಳಿಸುವ ಬೆಳೆಸುವ ಬಗ್ಗೆ ಚಿಕ್ಕಾಸಿನ ಪ್ರಯತ್ನವನ್ನೂ ಮಾಡುವುದಿಲ್ಲ. ಇದರ ಜೊತೆಗೆ, ಹಸುರುದ್ವೇಷವನ್ನು ಮೈಗೂಡಿಸಿಕೊಂಡು ಹೆಜ್ಜೆಯೂರುವೆಡೆಗಳಲ್ಲೆಲ್ಲ ಕಾಂಕ್ರೀಟು ಮೆತ್ತಿದ್ದೇವೆ. ಇದರ ಫಲವಾಗಿಯೇ ನೀರಿಗೆ ಹಾಹಾಕಾರ. ನೀರಿನ ಅಕ್ಷಯಪಾತ್ರೆಗಳಂಥ ಕರಾವಳಿ, ಮಲೆನಾಡುಗಳೇ ದಾಹದಿಂದ ಕಂಗಾಲಾದರೆ ಬಯಲುಸೀಮೆಯ ಪಾಡೇನು?

ನೀರಿನ ಬವಣೆ ಮಿತಿಮೀರಿ, ನಿಂತ ನೆಲ ಕಾವಲಿಯಂತಾದರೂ ಅದರ ಕಾವು ನಮಗೆ ತಟ್ಟಿದೆಯೇನು? ಕೊಳಕು ರಾಜಕಾರಣದ ಗರ ನಮ್ಮನ್ನು ಎಷ್ಟು ಆವರಿಸಿಕೊಂಡಿದೆಯೆಂದರೆ, ಅನ್ನ–ನೀರಿಗಿಂತಲೂ ಸಮಾಜದಲ್ಲಿ ಒಡಕುಂಟುಮಾಡುವ ಗಲೀಜುಕೃತ್ಯಗಳೇ ಮುಖ್ಯ ಎನ್ನಿಸುವಂತಾಗಿದೆ. ಇಂಥ ಸಂದರ್ಭದಲ್ಲೂ, ಕುರುಡು ರಾಜಕಾರಣ ಹಾಗೂ ಕಾಂಚಾಣದ ಕುಣಿತದಲ್ಲಿ ಜನಸಾಮಾನ್ಯರೂ ಹೆಜ್ಜೆ ಹಾಕುತ್ತಿರುವ ಸಂದರ್ಭದಲ್ಲೂ, 'ಇಲ್ಲೊಂದು ಮುಗುಳು/ ಅಲ್ಲೊಂದು ಹಕ್ಕಿ' ನಾಳೆಗಳ ಬಗ್ಗೆ ಭರವಸೆ ಉಳಿಸುವಂತಿವೆ. ಶಿರಸಿಯ ಗೌರಮ್ಮ, ಮಾಗಡಿಯ ತಿಮ್ಮಕ್ಕನಂಥ ಹೆಣ್ಣುಮಕ್ಕಳು ತಮ್ಮ ಕಾಯಕಪ್ರಜ್ಞೆಯಿಂದ ಸಮಾಜದ ಆರ್ದ್ರತೆ ಸಂಪೂರ್ಣ ಆರದಂತೆ ಕಾಪಿಟ್ಟಿದ್ದಾರೆ.

ನಿಮಗೆಷ್ಟು ಮಕ್ಕಳು ಎಂದು ಗೌರಮ್ಮನನ್ನು ಕೇಳಿದರೆ ಆಕೆ ತನ್ನ ಕಳ್ಳುಬಳ್ಳಿಗಳ ಜೊತೆಗೆ ಮೂರು ಬಾವಿಗಳನ್ನೂ ಲೆಕ್ಕಕ್ಕೆ ಹಿಡಿದಾಳು. ತಿಮ್ಮಕ್ಕಜ್ಜಿಯ ಪಾಲಿಗಂತೂ ನೆಟ್ಟು ಬೆಳೆಸಿದ ನೂರಾರು ಮರಗಳೆಲ್ಲ ಸಂತಾನವೇ.

ಏಕಾಂಗಿಯಾಗಿ ಬಾವಿ ತೋಡುವುದು, ನೂರಾರು ಮರಗಳನ್ನು ಬೆಳೆಸುವುದೇನು ಸಾಮಾನ್ಯ ಸಂಗತಿಯಾ? ಸರ್ಕಾರಿ ಲೆಕ್ಕಕ್ಕೆ ಸಿಗದ ಆ ಶ್ರಮ, ಏಕಾಂಗಿ ಸಾಹಸವನ್ನು ಒಂದು ಕೆಲಸ ಎನ್ನುವುದೇ ಸರಿಯಲ್ಲ; ಅದೊಂದು ತಪಸ್ಸು, ಅಪೂರ್ವ ಧ್ಯಾನ.

ಮನೆಯವರ ಬಾಯಾರಿಕೆ ಹಾಗೂ ಊರ ಜನರ ದಾಹಕ್ಕೆ ಮನಸ್ಸು ಮರುಗುವುದು ಸಹಜ. ಆದರೆ, ಗೌರಮ್ಮನ ಮನಸ್ಸು ಗಿಡ–ಮರಗಳ ಬಾಡಿದ ಮೋರೆಯನ್ನು ನೋಡಿ ತಲ್ಲಣಿಸಿತು. ತಾಯಿಕರುಳು ನಿಡುಸುಯ್ದು ಸುಮ್ಮನಾಗಲಿಲ್ಲ. ಬಾವಿ ತೋಡಿ ದಾಹ ತಣಿಸುವ ಸಾಹಸಕ್ಕೆ ಮುಂದಾಯಿತು. ತಿಮ್ಮಕ್ಕನೂ ಅಷ್ಟೇ. ಸಂತಾನವಿಲ್ಲದ ಕೊರತೆಯನ್ನು ಗಿಡಮರಗಳ ಪೋಷಣೆಯಲ್ಲಿ ತುಂಬಿಕೊಂಡಳು. ಉಡಿಯಕುಡಿಗಳನ್ನು ಸಲಹುವಷ್ಟೇ ಅಕ್ಕರಾಸ್ಥೆಯಿಂದ ನೆಟ್ಟ ಗಿಡಗಳಿಗೆ ನೀರೆರೆದು, ಬೇಲಿ ಕಟ್ಟಿ, ಪೊರೆದಳು.

ಮಣ್ಣಿನಲ್ಲಿನ ಜೀವಜಲದ ಕುಸಿತ ಮಾತ್ರವಲ್ಲ; ಅಂತರಂಗದಲ್ಲಿನ ಅಂತರ್ಜಲ ಕ್ಷೀಣಿಸುತ್ತಿರುವ ಆತಂಕವನ್ನೂ ಈ ಹೊತ್ತಿನ ಬಿಕ್ಕಟ್ಟು ಒಳಗೊಂಡಿದೆ. ಮಣ್ಣು ತೇವ ಕಳೆದುಕೊಳ್ಳುವುದಕ್ಕೂ, ಮನಸ್ಸು ಶುಷ್ಕಗೊಳ್ಳುವುದಕ್ಕೂ ಸಂಬಂಧವಿದೆ. ಬಹರೇನಿನ ಬೋಧಿಸತ್ವದ ಕಿವಿಮಾತು ಇಲ್ಲಿಗೆ ಕೇಳಿಸದಿರಬಹುದು; ಇಲ್ಲಿನವರೇ ಆದ ಗೌರಮ್ಮ–ತಿಮ್ಮಕ್ಕನ ಬದುಕಾದರೂ ನಮ್ಮ ಕಣ್ಣು ತೆರೆಸಬೇಕಲ್ಲವೆ?

■ **ಚಂಪಕಮಾಲಾ**

## ಮಾತೇ ಮುತ್ತು

- ಮಣ್ಣು ಬಿಟ್ಟು ಮಡಿಕೆಯಿಲ್ಲ, ತನ್ನ ಬಿಟ್ಟು ದೇವರಿಲ್ಲ.
  –ಶಿಶುನಾಳ ಶರೀಫ
- ಶಿಕ್ಷಣದ ಬೇರುಗಳು ಕಹಿ ಇರಬಹುದು, ಆದರೆ ಅದರ ಫಲ ಸಿಹಿಯಾಗೇ ಇರುತ್ತದೆ.
  –ಅರಿಸ್ಟಾಟಲ್
- ನಿರ್ಭಯವೂ ನಿಷ್ಪಕ್ಷಪಾತವೂ ಆದ ಜಗತ್ತಿನ ಅನ್ವೇಷಣೆಯೇ ವಿಜ್ಞಾನ.
  –ಸಿ.ವಿ. ರಾಮನ್
- ಜೀವನದಲ್ಲಿ ಭಯ ಪಡುವಂತಹದ್ದು ಏನೂ ಇಲ್ಲ. ಹೆಚ್ಚು ತಿಳಿದುಕೊಂಡಷ್ಟೂ ಭಯ ಕಡಿಮೆಯಾಗುತ್ತದೆ.
  –ಮೇಡಂ ಕ್ಯೂರಿ
- ಮನುಷ್ಯನನ್ನು ಒಳ್ಳೆಯವನನ್ನಾಗಿ ಮಾಡುವುದೇ ನಿಜವಾದ ಧರ್ಮ.
  –ನಾರಾಯಣ ಗುರು
- ಚಪ್ಪಾಳೆ ನನಗಲ್ಲ, ನನ್ನೊಳಗಿನ ಸರಸ್ವತಿಗೆ.
  –ರಾಜ್‌ಕುಮಾರ್
- ಹೂವು ಬಳ್ಳಿಗೆ ದೀಪ/ ಹಸಿರು ಬಯಲಿಗೆ ದೀಪ/ ಹುಲಿಯ ಕಣ್ಣಿನ ದೀಪ ಕಾಡಿನಲ್ಲಿ!
  –ಕೆ.ಎಸ್. ನರಸಿಂಹಸ್ವಾಮಿ
- ಒಂದು ಉದ್ಯಾನ ಹಾಗೂ ಗ್ರಂಥಾಲಯವನ್ನು ಒಳಗೊಂಡಿದ್ದರೆ ಅಗತ್ಯವಿರುವ ಎಲ್ಲವನ್ನೂ ಒಳಗೊಂಡಂತೆ.
  –ಸಿಸಿರೋ